# ಕಲಿಕಾಫಲ – 7

ಕಥೆ, ಕವಿತೆಗಳನ್ನು ಓದಿ, ಅವುಗಳಲ್ಲಿನ ವರ್ಣನಾತ್ಮಕ, ಭಾವನಾತ್ಮಕದಂತಹ ಬರವಣಿಗೆಯ ಶೈಲಿಯನ್ನು ಗುರುತಿಸುವರು ಮತ್ತು ಇತರರ ವಿಚಾರ, ಸಂಭಾಷಣೆ ಮತ್ತು ಅಭಿಪ್ರಾಯಗಳು ಹಾಗೂ ಅನುಭವಗಳನ್ನು ತಮ್ಮದೇ ಶೈಲಿಯಲ್ಲಿ ಬರೆಯುವರು.

## ಚಟುವಟಿಕೆ 1: "ಕಥಾ ಶೈಲಿ"

**ಈ ಕಥೆಯನ್ನು ಆಸಕ್ತಿಯಿಂದ ಓದಿ ಅರ್ಥೈಸಿಕೊಳ್ಳಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.**

ಎಂದಿನಂತೆ ಒಂದು ದಿನ ರಾಜನು ತನ್ನ ಆಸ್ಥಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದನು. ಅಲ್ಲಿ ನೆರೆದಿದ್ದ ಪ್ರಜೆಗಳು ಮನರಂಜನಾ ಕಾರ್ಯಕ್ರಮಗಳಿಂದ ಖುಷಿಪಟ್ಟರು. ಕೊನೆಯಲ್ಲಿ ರಾಜ ಅಲ್ಲಿ ನೆರೆದಿದ್ದ ಬುದ್ಧಿವಂತರಿಗೆ ಒಂದೆರಡು ಸಮಸ್ಯೆಗಳ ಪ್ರಶ್ನೆಗಳನ್ನು ಕೇಳಿದನು. ಅವುಗಳಲ್ಲಿ ಮೊದಲನೆಯ ಪ್ರಶ್ನೆ ಹೀಗಿತ್ತು. "ಒಂದು ದೋಣಿ ತುಂಬಾ ಒಂದೇ ಅಳತೆಯ ತೆಂಗಿನಕಾಯಿ ತುಂಬಲಾಗಿತ್ತು. ದೋಣಿಯಲ್ಲಿ ತೆಂಗಿನಕಾಯಿ ಬೆಳೆದ ರೈತನ ಜೊತೆ ದೋಣಿ ನಡೆಸುವ ಅಂಬಿಗನಿದ್ದ. ದೋಣಿಯಲ್ಲಿ ಇನ್ನೂ ಒಂದೇ ಒಂದು ತೆಂಗಿನಕಾಯಿ ಹಾಕಿದರೂ ದೋಣಿ ಮುಳುಗುತ್ತಿತ್ತು. ಆದರೂ ಆ ರೈತ ಇನ್ನೊಂದು ತೆಂಗಿನಕಾಯಿಯನ್ನು ಮತ್ತೊಂದು ದಡಕ್ಕೆ ತೆಗೆದುಕೊಂಡು ಹೋಗುತ್ತಾನೆ, ಹೇಗೆ?" ಎಂದು ಕೇಳಿದನು.

ಆಗ ಒಬ್ಬ ಬುದ್ಧಿವಂತ ಎದ್ದು ನಿಂತು, "ಅವನು ಎರಡು ತೆಂಗಿನಕಾಯಿಗಳನ್ನು ಒಂದಾದ ಮೇಲೆ ಒಂದರಂತೆ ಮೇಲೆ ಹಾರಿಸುತ್ತಾ ಒಂದನ್ನು ಕೈಯಲ್ಲಿ ಹಿಡಿಯುತ್ತಾ, ಇನ್ನೊಂದು ಗಾಳಿಯಲ್ಲಿ ಇರುವಂತೆ ನೋಡಿಕೊಳ್ಳುತ್ತಾನೆ. ದಡ ಬರುವ ತನಕ ಈ ರೀತಿ ಮಾಡಿ ಒಂದು ಹೆಚ್ಚು ತೆಂಗಿನಕಾಯಿಯನ್ನು ತರುತ್ತಾನೆ" ಎಂದಾಗ ಎಲ್ಲರೂ ಚಪ್ಪಾಳೆ ತಟ್ಟುತ್ತಾರೆ.

ರಾಜ 2ನೇ ಸಮಸ್ಯೆಯನ್ನು ಹೇಳುತ್ತಾನೆ. "ಒಮ್ಮೆ ಒಬ್ಬ ಸೇವಕ ಒಂದು ಟೈರ್‌ಗಾಡಿಯ ತುಂಬಾ ಸಾಮಾನುಗಳನ್ನು ಹೇರಿಕೊಂಡು ಹೋಗುತ್ತಾನೆ. ಸ್ವಲ್ಪ ದೂರ ಹೋದ ಮೇಲೆ ಎದುರಿಗೆ ಒಂದು ಸೇತುವೆಯ ಕಮಾನು ಸಿಗುತ್ತದೆ. ತುಂಬಿದ ಗಾಡಿಯ ತುದಿ ಸೇತುವೆಯ ಕಮಾನಿಗೆ ತಾಗುತ್ತದೆ. ದಾಟಲು ಸಾಧ್ಯವಾಗುವುದಿಲ್ಲ. ಒಂದು ಇಂಚು ಗಾಡಿಯ ತುದಿ ತಗ್ಗಿದರೆ ಗಾಡಿ ದಾಟುತ್ತಿತ್ತು. ಆದರೂ ಆ ಸೇವಕ ಗಾಡಿಯನ್ನು ಸೇತುವೆಯಿಂದ ಆಚೆ ಕಡೆ ದಾಟಿಸಿದ. ಹೇಗೆ?" ಎಂದು ಕೇಳಿದ.

ಆಗ ಇನ್ನೊಬ್ಬ ಬುದ್ಧಿವಂತ ಎದ್ದು ನಿಂತು "ಆ ಸೇವಕನು ಆ ಗಾಡಿಯ ಒಂದು ಇಂಚು ತಗ್ಗುವಷ್ಟು ಚಕ್ರದ ಗಾಳಿಯನ್ನು ಸ್ವಲ್ಪ ತೆಗೆದು ಗಾಡಿ ಸೇತುವೆಯನ್ನು ದಾಟುವಂತೆ ಮಾಡುತ್ತಾನೆ" ಎಂದಾಗ ಎಲ್ಲಾ ಕಡೆಯಿಂದಲೂ ಚಪ್ಪಾಳೆಯ ಸುರಿಮಳೆ, ರಾಜನು ಆ ಬುದ್ಧಿವಂತರಿಗೆ ಬಹುಮಾನಗಳನ್ನು ಕೊಡುವುದರ ಮೂಲಕ ಗೌರವಿಸುತ್ತಾನೆ. ಎಲ್ಲರೂ ರಾಜನಿಗೆ ಜೈಕಾರ ಹಾಕುತ್ತಾರೆ.

1. ಈ ಕಥೆಯಲ್ಲಿ ಬರುವ ರಾಜನ ಬಗ್ಗೆ ಸಹಪಾಠಿಗಳೊಂದಿಗೆ ಚರ್ಚಿಸಿ ಆತನ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.

ರಾಜ ನಾನು ಅರಮನೆಯಲ್ಲಿ ವಿಲಾಸಿ ಜೀವನ ನಡೆಸುವುದರ ಜೊತೆಗೆ ಜನರನ್ನು ರಂಜಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಬಹಳ ಉತ್ತಮ ರಾಜನ ಲಕ್ಷಣವಾಗಿದೆ. ಜೊತೆಗೆ ರಾಜನು ವಿವಿಧ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಉತ್ತರ ಕೊಟ್ಟವರಿಗೆ ಬಹುಮಾನ ಕೊಡುತ್ತಿರುವುದು ಆತನ ಉದಾರ ಗುಣವನ್ನು ಸೂಚಿಸುತ್ತದೆ.

2. ಈ ಕಥೆಯನ್ನು ಸಾರಾಂಶೀಕರಿಸಿ.

ರಾಜನು ಏರ್ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವನ ಪ್ರಜೆಗಳು ಭಾಗವಹಿಸಿ ಸಂತೋಷ ಪಟ್ಟರು. ರಾಜನು ಕೊನೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಪ್ರಜೆಗಳಲ್ಲಿ ಇಬ್ಬರು ಬುದ್ಧಿವಂತರು ಆ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಬಹುಮಾನವನ್ನು ಪಡೆದರು. ಪ್ರಶ್ನೆಗಳು ಬುದ್ಧಿವಂತಿಕೆಯನ್ನು ಹುಡುಕುವಂತೆ ಇದ್ದವು. ರಾಜನು ಒಂದು ದೋಣಿಯ ಪ್ರಶ್ನೆ ಇನ್ನೊಂದು ಟೈಯರ್ ಗಾಡಿಯ ಪ್ರಶ್ನೆಯನ್ನು ಕೇಳಿದನು.

ಚಟುವಟಿಕೆ 2: "ಕವಿತೆಯ ಶೈಲಿ–ನನ್ನ ಕುದುರೆ"

ಪದ್ಯಭಾಗವನ್ನು ಅರ್ಥ ಮಾಡಿಕೊಂಡು. ಕೆಳಲಾದ ಪ್ರಶ್ನೆಗಳಿಗೆ ಉತ್ತರಿಸೋಣ.

### ಅಜ್ಜನ ಕೋಲು

ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ
ನಾಲನು ಬಡಿಸದ ಜೂಲವ ಹೊದಿಸದ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ
ಅರಬರ ದೇಶದಿ ದೊರೆಯದ ಕುದುರೆ
ಕಾಠೇವಾಡದಿ ಕಾಣದ ಕುದುರೆ
ಅರಸು ಮಕ್ಕಳಿಗೆ ಸಿಕ್ಕದ ಕುದುರೆ
ನನಗೇ ಸಿಕ್ಕಿದೆ ನನ್ನೀ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ

1. ಈ ಕವಿತೆಯ ರಚನಾಕಾರರು ಯಾರೆಂದು ಹುಡುಕಿ ಬರೆಯಿರಿ. (ಅಗತ್ಯ ಎನಿಸಿದರೆ ಅಂತರಜಾಲದ ಸಹಾಯ ಪಡೆಯಿರಿ)

ಈ ಕವಿತೆಯ ರಚನಾಕಾರರು ಕವಿ 'ಸಿದ್ದಯ್ಯ ಪುರಾಣಿಕ್',

2. ಕವಿತೆಯ ಸಾರಾಂಶ ಬರೆಯಿರಿ.

ಸಿದ್ದಯ್ಯ ಪುರಾಣಿಕ್ ಅವರ ಅವರು ಬರೆದಿರುವ ಶಿಶು ಗೀತೆ ಇದು. ಮಗು ತನ್ನ ಅಜ್ಜನ ಕೋಲಿನಿಂದ ಒಂದು ಕುದುರೆಯನ್ನು ಮಾಡಿದ್ದಾನೆ ಈ ಕುದುರೆ ತನ್ನದೆಂದು ಬೇರೆ ಯಾರಿಗೂ ಇದು ಇಲ್ಲವೆಂದು ಹೆಮ್ಮೆ ಪಡುತ್ತಾನೆ. ಈ ಕುದುರೆಯು ಹೆಜ್ಜೆ ಹೆಜ್ಜೆಗೂ ಕುಣಿಯುತ್ತದೆ ಕಾಲಿಲ್ಲದೆ ನಡೆಯುತ್ತದೆ ಆಹಾರವಿಲ್ಲದೆ ಬದುಕುತ್ತದೆ.
ಈ ಕುದುರೆಗೆ ಆಹಾರವನ್ನು ಬಡಿಸುವ ಅಗತ್ಯವಿಲ್ಲ ಲಾಲನೆ ಪಾಲನೆ ಬೇಕಿಲ್ಲ ಮೇಲೆ ಜೀನನ್ನು ತೊಡಿಸುವುದು ಬೇಕಿಲ್ಲ ಇಂಥ ಕುದುರೆಯು ಹೊರಬರ ದೇಶದಲ್ಲಿಯೂ ದೊರೆಯದು ಗಾಟೆವಾಡ ದಲ್ಲೂ ಕಾಣದು ರಾಜರ ಮಕ್ಕಳಿಗೂ ಈ ಕುದುರೆಯು ಸಿಕ್ಕದು ಆದರೆ ತನಗೆ ಮಾತ್ರ ಈ ಕುದುರೆ ದೊರೆತಿದೆ ಎಂದು ಮಗು ಹೆಮ್ಮೆ ಪಡುತ್ತಿದೆ.

3. ಚಿತ್ರ ಗಮನಿಸಿ, ಅದರ ಬಗ್ಗೆ ನಿಮ್ಮದೇ ಆದ ನಾಲ್ಕು ಸಾಲಿನ ಕವನ ರಚಿಸಿ.



ಆಹಾ. ನೋಡಿ ಸುಂದರ ನವಿಲು
ಊರಿಗೆ ಬಂದಿದೆ ಕಾಡಿನ ನವಿಲು
ಸುಂದರ ಕಣ್ಣಿನ ಬಾಲದ ನವಿಲು
ನೀಲಿ ಕತ್ತಿನ ರಾಜ ಕಿರೀಟ ಧರಿಸಿದ ನವಿಲು

4. ನಿಮಗೆ ಇಷ್ಟವಾದ ವಿಷಯದ ಕುರಿತು ನಾಲ್ಕು ಸಾಲಿನ ಕವನ ರಚಿಸಿ.

ಕರುನಾಡ ಮಕ್ಕಳಿಗೆ ಬಂದಿದೆ ಹೊಸ ಪುಸ್ತಕ
ಕಲಿಕಾ ಬಲವರ್ಧನೆ ಮಾಡುವ ವಿದ್ಯಾರ್ಥಿ ಚಟುವಟಿಕೆ ಪುಸ್ತಕ
ಗುರು ಶಿಷ್ಯರು ಸೇರಿ ಬರೆಯುವ ಪುಸ್ತಕ
ಓದುಬರಹ ಲೆಕ್ಕ ಕಲಿಸುವ ಬಲವರ್ಧನೆ ಪುಸ್ತಕ

ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಮಳೆಗಾಲದಲ್ಲಿ ಬರುವ ಚಿಟ್ಟೆ
ಸುಂದರ ಬಣ್ಣ ಸುಂದರ ವಿನ್ಯಾಸ
ನೋಡಲು ಚೆನ್ನ ಬಣ್ಣದ ಚಿಟ್ಟೆ

## ಚಟುವಟಿಕೆ 3: ಆಡೋಣ ಬಾ

**ಪದ್ಯವನ್ನು ಸರಿಯಾಗಿ ಓದಿ. ನಂತರ ಈ ಕವಿತೆಯನ್ನು ಕಲಿತು ಸಹಪಾಠಿಗಳೊಂದಿಗೆ ತರಗತಿಯಲ್ಲಿ ಹಾಡಿರಿ.**

### ಆಡೋಣ ಬಾ, ಪ್ಲೀಸ್!

ಠೂ ಬಿಡ್ತೀವಿ ನೋಡು ನೀ ಆಟಕ್ ಬರದಿದ್ರೆ
ಏತಾ–ಪೇತಾ ಕಳೆಗಟ್ಟತ್ತೆ ನೀ ನಮ್ ಜೊತೆಗಿದ್ರೆ.
ಕಂಪ್ಯೂಟರ್ ಗೇಮ್ ಬೇಡ ಎತ್ತಿಟ್ ಬಿಡು ಸಾಕು
ಕಣ್ಣಾಮುಚ್ಚೆ ಕಾಡೇಗೂಡೆ ಆಡೋಕ್ ನೀನ್ ಬೇಕು.
ಬೌಲಿಂಗ್ ಮಾಡು ನೀನು ಬ್ಯಾಟಿಂಗ್ ಮಾಡ್ತೀನ್ ನಾನು
ಫೀಲ್ಡಿಂಗ್, ಕೀಪಿಂಗ್, ಕ್ಯಾಚಿಂಗ್ ಎಲ್ಲಾ ಮಾಡ್ತಾನ್ ಅವನು.
ಗೋಲಿ ಬಚ್ಚಿಟ್ಟಿದ್ದಾಳೆ ಅಮ್ಮ ಬಂದು ಡಬ್ಬಿ ತಕ್ಕೊಡು
ಚಿನ್ನಿ–ದಾಂಡು ಎಲ್ಲೋ ಇದೆ ಹುಡ್ಕೋದಕ್ ಹೆಲ್ಪ್ ಮಾಡು.
ಪ್ಲೀಸ್, ಪ್ಲೀಸ್, ಬಾರಪ್ಪ ಆನೆ ಸವಾರಿ ಮಾಡ್ಸಪ್ಪ
ಲ್ಯಾಪ್‌ಟಾಪ್ ತಂಟೆ ಬೇಡಪ್ಪ ನಮ್ ಜೊತೆ ನೀ ಆಡಪ್ಪ!

– ಬೇಂದ್ರೆ ಮಂಜುನಾಥ

1. ಈ ಪದ್ಯದಲ್ಲಿರುವ ಹೊಸ ಪದಗಳನ್ನು ಗುರುತಿಸಿ, ಅದರ ಅರ್ಥ ತಿಳಿದು ಪಟ್ಟಿ ಮಾಡಿರಿ.

ಠೂ ಬಿಡು.... ಮಾತನಾಡಿಸದಿರು

ಏತಾ ಪೇತಾ.... ಯಾವುದೇ ದುಗುಡ ದುಃಖ ದುಮ್ಮಾನ ದೆವ್ವ ಪಿಶಾಚಿ.

ಕಳೆಗಟ್ಟು... ರಂಗೇರು

ಕಾಡೆಗೂಡೆ... ಬಚ್ಚಿಟ್ಟುಕೊಳ್ಳುವ ಜಾಗ

ಇಂಗ್ಲೀಷ್ ಪದಗಳು ಕಂಪ್ಯೂಟರ್ ಗೇಮ್ ಬ್ಯಾಟಿಂಗ್ ಬೌಲಿಂಗ್ ಬಿಲ್ಡಿಂಗ್ ಕೀಪಿಂಗ್ ಕ್ಯಾಚಿಂಗ್ ಲ್ಯಾಪ್ಟಾಪ್ ಹೆಲ್ಪ್

2. ಈ ಕವಿತೆಯನ್ನು ಅರ್ಥ ಮಾಡಿಕೊಂಡು ನಿಮ್ಮದೇ ಮಾತುಗಳಲ್ಲಿ ಸಾರಾಂಶ ಬರೆಯಿರಿ.

ಬಾಲಕರು ಒಬ್ಬ ಹುಡುಗನನ್ನು ಅವನ ಸಹಪಾಠಿಯನ್ನು ಅವನ ಗೆಳೆಯನನ್ನು ಆಟಕ್ಕೆ ಕರೆಯುತ್ತಿರುವ ಒಂದು ಕವಿತೆಯಾಗಿದೆ ಅವನು ಬರೋದಿದ್ದರೆ ಹೂ ಬಿಡುತ್ತೇವೆ ಎನ್ನುತ್ತಿದ್ದಾರೆ ಅವರ ಜೊತೆ ಹೋದರೆ ಎಲ್ಲಾ ದುಗುಡ ದುಮಾನ ದೆವ್ವ ಪಿಶಾಚಿಗಳು ಬಿಟ್ಟು ಹೋಗುತ್ತವೆ ಎಂದು ಹೇಳುತ್ತಿದ್ದಾರೆ ಚಿನ್ನಿದಾಂಡು ಆಡೋಣ. ಕ್ರಿಕೆಟ್ ಆಡೋಣ ಬೋಲಿಂಗ್ ಬ್ಯಾಟಿಂಗ್ ಮಾಡೋಣ ಬಾ ಎಂದು ಕರೆಯುತ್ತಿದ್ದಾರೆ. ಕಂಪ್ಯೂಟರ್ ಗೇಮ್ ಲ್ಯಾಪ್ಟಾಪ್ ಬಿಟ್ಟು ಹೊರಡು ಅದರಲ್ಲಿ ಏನು ಸುಖವಿಲ್ಲ ಕೇವಲ ಕುಳಿತು ಮಾಡುವುದರಿಂದ ದೇಹಸುತ್ತದೆ ನಮ್ಮ ಜೊತೆಗೆ ಬಾ ದೇಹ ಮನಸ್ಸು ಉಲ್ಲಾಸಿತವಾಗುತ್ತದೆ. ಆರೋಗ್ಯ ವೃದ್ಧಿಯಾಗುತ್ತದೆ ಎಂದು ಕರೆಯುತ್ತಿದ್ದಾರೆ.

### ಚಟುವಟಿಕೆ 4: ನಿಮ್ಮ ಮಾತು ನಿಮ್ಮ ಭಾಷೆ

**ಈ ವಾಕ್ಯ ವೃಂದವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಿ.**

> ಒಂದು ಆಡು, ಒಂದು ಕುರಿ, ಒಂದು ಮೂಗು ಬಸಪ್ನ ತೊಕ್ಕೊಟ್ಟಿನ, ಅವು ಮೇಯುಸ್ತ ಅದರಲ್ಲೆ ಹೆಚ್ಚೊಕ್ಲು ಆಯ್ತಿನಿ ಅಂದನು. ಮಗ ಕೇಳಿದ್ದನ್ನು ಅವ್ವ ಸೆರುಗೊಡ್ಡಿ ವಾರಕ ಅಂತ ಬೇಡಿ ತರಲು ಅಲ್ಲೊಂದು ರೊಪ್ಪವಾಗಿ ಯಾಡನು ಮೇಯುಸ್ತಾ ಇರಬೇಕಾದಾಗ ಎಲ್ಲರಿಗಿಂತ್ಲೂ ಮೊದ್ಲನೆ ಏಳನು, ಅತ್ಲಾಗ ಜೀತಕಾರ ಐಕಳು ಬರೋಕು ಮೊದ್ಲುವ ಇದ್ದಬದ್ದ ಹಸುರ ತಾನೇ ಮೇಯ್ಸಿ ಬುಡೋನು, ಆಗ ಯಾನಾಯ್ತು ಇವ ಮೇಯ್ಸ ಚಂದಕ ಎಲ್ರೂ ಮ್ಯಾಲ ಬಿದ್ದು ನಂ ದನ ಮೇಯ್ಸು ನಂ ಆಡು ಕುರಿ ಮೇಯ್ಸು ಅಂತ ರಾಸುಗಳು ಬಂದು ಬೀಳ್ತಾ ಯಾಡನ ರೊಪ್ಪವು ಹಿಗ್ಗಿತು.

ಯಾಡನಿಗೆ ಹೊಸ ಉದ್ಯೋಗ ಬೇಕಾಗಿತ್ತು ಒಂದು ಮೇಕೆ ಒಂದು ಕುರಿ ಮತ್ತು ಒಂದು ಮೂಗು ಬಸಪ್ಪನನ್ನು ಮೇಯಿಸುತ್ತಾ ಅದರಲ್ಲಿ ಹೆಚ್ಚು ಸ್ಥಿತಿವಂತನಾಗುತ್ತೇನೆ ಎಂದು ಹೇಳಿದನು. ಅವನ ತಾಯಿ ಇದಕ್ಕಾಗಿ ಸೆರಗನ್ನು ಒಡ್ಡಿ ಭಿಕ್ಷೆ ಬೇಡಿ ಅವುಗಳನ್ನು ಯಾಡನಿಗೆ ತಂದುಕೊಟ್ಟಳು. ಅಲ್ಲಿ ಒಂದು ಕೊಟ್ಟಿಗೆ ನಿರ್ಮಾಣವಾಗಿ ಯಾಡನು ಬೆಳಿಗ್ಗೆ ಬಹುಬೇಗ ಎದ್ದು ಆ ಪ್ರಾಣಿಗಳನ್ನು ಮೇಯಿಸುತ್ತಿದ್ದನು. ಜೀತದಾ ಆಳುಗಳು ಮೇಯಿಸಲು ಬರುವ ಮುಂಚೆಯೇ ಚೆನ್ನಾಗಿ ಬೆಳೆದಿರುವ ಹುಲ್ಲನ್ನು ಮೇಯಿಸಿಬಿಡುತ್ತಿದ್ದನು. ಇವನು ಮೇಯಿಸುವ ರೀತಿ ನೋಡಿ ಎಲ್ಲಾ ಜನರು ತಮ್ಮ ದನ ಹಾಡು ಕುರಿಗಳನ್ನು ತಂದು ಇವನಿಗೆ ಒಪ್ಪಿಸಿದರು ನಮ್ಮ ದನ ಕುರಿ ಆಡು ಮೇಯಿಸು ಎಂದು. ಅಲ್ಲಿಗೆ ಅವನು ಕೊಟ್ಟಿಗೆ ತುಂಬಿ ಹೋಯಿತು.

## ಚಟುವಟಿಕೆ 5: "ವಿಚಾರ ಮಾಡು"

**ಕಥೆಯನ್ನು ಓದಿ ಅರ್ಥ ಮಾಡಿಕೊಳ್ಳಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ದೂರದೇಶಕ್ಕೆ ಪ್ರಯಾಣ ಹೊರಟ ಇಬ್ಬರೂ ಪ್ರಯಾಣಿಕರು ದಾರಿಯಲ್ಲಿ ಸಂಧಿಸಿದರು. ಇಬ್ಬರೂ ಮಾತನಾಡುತ್ತಾ ಕುಳಿತಿದ್ದಾಗ ಅವರಿಬ್ಬರೂ ಒಂದೇ ಜಾಗಕ್ಕೆ ಹೊರಟಿರುವುದಾಗಿ ತಿಳಿಯಿತು. ಮೊದಲ ಪ್ರಯಾಣಿಕನು 'ದಾರಿಯಲ್ಲಿ ನಾಲ್ಕಾರು ಕಾಡುಗಳಿವೆ. ಅಂಥ ಕಡೆ ಒಬ್ಬೊಬ್ಬರೇ ಹೋಗುವುದು ಕ್ಷೇಮವಲ್ಲ. ಏನೇ ಕಷ್ಟ ಬರಲಿ, ನಾವಿಬ್ಬರೂ ಜೊತೆಯಾಗಿರೋಣ' ಎಂದನು. 'ಆಗಲಿ ಅದಕ್ಕೇನಂತೆ. ಜೊತೆಯಾಗಿ ಸಾಗೋಣ' ಎಂದ ಎರಡನೆಯ ಪ್ರಯಾಣಿಕ.

ಅವರಿಬ್ಬರೂ ಜೊತೆಯಾಗಿ ಮುಂದುವರೆದರು. ಆಗ ದಟ್ಟವಾದ ಕಾಡೊಂದು ಸಿಕ್ಕಿತು. ಅವರು ಮೆಲ್ಲನೆ ಹೆಜ್ಜೆ ಇಡುತ್ತಿದ್ದಾಗ ದೊಡ್ಡದಾದ ಕರಡಿಯೊಂದು ಇವರ ಎದುರಿಗೆ ಬರಲಾರಂಭಿಸಿತು. ಮರವೊಂದು ಹತ್ತಿರವಿದ್ದರಿಂದ ಎರಡನೆಯ ಪ್ರಯಾಣಿಕ ತಕ್ಷಣವೇ ಕೊಂಬೆ ಹಿಡಿದು ಮೇಲೇರಿದ. ಮರ ಹತ್ತಲು ಸಮಯವಿಲ್ಲ ಎಂಬುದನ್ನು ಅರಿತ ಮೊದಲ ಪ್ರಯಾಣಿಕ ನೆಲದ ಮೇಲೆ ಬೋರಲಾಗಿ ಮಲಗಿದ. ಕರಡಿ ಹತ್ತಿರ ಬಂದು ನೆಲದ ಮೇಲಿದ್ದವನನ್ನು ಮೂಸಿತು. ಅವನ ಕಿವಿಯ ಬಳಿ ತನ್ನ ಮೂತಿಯನ್ನು ಇಟ್ಟು ವಾಸನೆ ನೋಡಿತು. ಅವನು ಸತ್ತಿರಬೇಕೆಂದು ನಿರ್ಧರಿಸಿ ಮುಂದೆ ಹೊರಟು ಹೋಯಿತು.

ಮರದ ಮೇಲಿದ್ದವನು ಕೆಳಗೆ ಇಳಿದು ಬಂದ. 'ಕರಡಿ ನಿನ್ನ ಕಿವಿಯಲ್ಲಿ ಏನು ಹೇಳಿತು?' ಎಂದು ಕೇಳಿದನು. ಕೆಳಗಿದ್ದವನು ತಿರಸ್ಕಾರದಿಂದ 'ಮಾತಿಗೆ ತಪ್ಪುವ ಸಹ ಪ್ರಯಾಣಿಕನನ್ನು ನಂಬಿದ ನೀನು ಮೂರ್ಖ ಎಂದು ಕರಡಿ ಹೇಳಿತು' ಎಂದ.

1. ಈ ಕತೆಯು ಹೇಳುವ ನೀತಿ ಯಾವುದು?

ಪರೀಕ್ಷೆ ಮಾಡಿ ಗೆಳೆತನ ಮಾಡು. ಆಪತ್ತಿಗೆ ಆದವನೇ ಗೆಳೆಯ. ದಾರಿಯಲ್ಲಿ ಸಿಕ್ಕವರೆಲ್ಲ ಗೆಳೆಯರಲ್ಲ.

2. ಇನ್ನೊಬ್ಬರಿಗೆ ಸಹಾಯ ಮಾಡುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಾವು ಒಬ್ಬಂಟಿಗರಲ್ಲ. ನಾವು ಬೇರೆಯವರೊಂದಿಗೆ ಇದ್ದೇವೆ ಬೇರೆಯವರಿಗೆ ಸಹಾಯ ಮಾಡಬೇಕು ಅವರು ನಮಗೆ ಸಹಾಯ ಮಾಡಬೇಕು ಈ ರೀತಿ ಜೀವನ ಸಾಗುತ್ತದೆ. ಭೂಮಿಯ ಮೇಲೆ ನಾವು ಒಬ್ಬರೇ ಹುಟ್ಟಿಲ್ಲ.

3. ನೀವು ಎರಡನೇ ಪ್ರಯಾಣಿಕನ ಸ್ಥಾನದಲ್ಲಿದ್ದರೆ ಏನು ಮಾಡುವಿರಿ?

ಮರ ಹತ್ತಿದ ಮೇಲೆ ನಮ್ಮ ಗೆಳೆಯನನ್ನು ಕೈ ನೀಡಿ ಅವನನ್ನು ಕೂಡ ಮೇಲಕ್ಕೆ ಎಳೆದುಕೊಳ್ಳುತ್ತಿದ್ದೆನು.
ಅಷ್ಟು ಆಗಲಿಲ್ಲ ಎಂದರೆ ಇಬ್ಬರು ಸೇರಿ ಕರಡಿಯನ್ನು ಓಡಿಸುತ್ತಿದ್ದೆವು. ಇಬ್ಬರು ಸೇರಿ ಹೆಚ್ಚು ಗಲಾಟೆ ಮಾಡಿ ಕರಡಿಯನ್ನು ಓಡಿಸಲು ಪ್ರಯತ್ನ ಮಾಡುತ್ತಿದ್ದೆವು. ಉಪಾಯ ಮಾಡಿ ಇಬ್ಬರೂ ತಪ್ಪಿಸಿಕೊಳ್ಳುತ್ತಿದ್ದೆವು.

4. ಈ ಕಥೆಯನ್ನು ಓದಿದ ನಂತರ ನೀವು ಯಾವ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ಬಯಸುವಿರಿ?

ಮೊಟ್ಟಮೊದಲು ಪ್ರಯಾಣ ಮಾಡಬೇಕಾದರೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. ಕಾಡಿನಲ್ಲಿ ಪ್ರಯಾಣ ಮಾಡಬೇಕಾದಾಗ ಒಬ್ಬೊಬ್ಬರು ಇಬ್ಬರು ಹೋಗದೆ ಗುಂಪಾಗಿ ಹೋಗುವುದು ಒಳ್ಳೆಯದು. ಕಷ್ಟ ಬಂದಾಗ ಒಬ್ಬೊಬ್ಬರೇ ಓಡಿ ಹೋಗದೆ ಆ ಕಷ್ಟವನ್ನು ಗುಂಪಿನಲ್ಲಿ ಎದುರಿಸುವುದನ್ನು ರೂಢಿಸಿಕೊಳ್ಳಬೇಕು. ಗುಂಪಿನಲ್ಲಿ ಇದ್ದಾಗ ಕಷ್ಟಗಳು ಸುಲಭವಾಗಿ ಬಗೆಹರಿಯುತ್ತವೆ.

**ಚಟುವಟಿಕೆ 6: "ಪುಸ್ತಕ ಬಳಸಿ ಮಸ್ತಕ ಬೆಳೆಸಿ"**

1. ಇಲ್ಲಿ ನೀಡಿರುವ ಪುಸ್ತಕಗಳ ಬಗ್ಗೆ ಓದಿದವರಿಂದ ವಿಚಾರಿಸಿ, ನೀವೂ ಓದಿ, ಆತ್ಮಕಥೆ, ಜೀವನಚರಿತ್ರೆ ಮತ್ತು ಪ್ರವಾಸ ಕಥನಗಳನ್ನಾಗಿ ವಿಂಗಡಿಸಿ.

(ಸುರಗಿ, ನೆನಪಿನ ದೋಣಿಯಲ್ಲಿ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಅಣ್ಣನ ನೆನಪು, ಕನಸಿನ ಪಯಣ, ನಡೆದು ಬಂದ ದಾರಿ, ಸಚಿನ್ ತೆಂಡುಲ್ಕರ್, ಬರಹಗಾರನ ಬದುಕು, ಕಾದಂಬರಿಕಾರನ ಬದುಕು, ಹೋರಾಟದ ಹಾದಿ. ಅಲೆಮಾರಿ ಅಂಡಮಾನ್)

| ಆತ್ಮಕಥೆ | ಜೀವನ ಚರಿತ್ರೆ | ಪ್ರವಾಸ ಕಥನ |
|---|---|---|
| ನೆನಪಿನ ದೋಣಿ,.... ಕುವೆಂಪು<br>ಹುಚ್ಚು ಮನಸ್ಸಿನ ಹತ್ತು ಮುಖಗಳು, ....ಶಿವರಾಮ ಕಾರಂತ<br>ಸುರಗಿ,.... ಯು ಆರ್ ಅನಂತಮೂರ್ತಿ<br>ಬರಹಗಾರನ ಬದುಕು... ಅನಕೃ<br>ಕಾದಂಬರಿಕಾರನ ಬದುಕು.... ಬಸವರಾಜ ಕಟ್ಟಿಮನಿ<br>ಹೋರಾಟದ ಹಾದಿ...... ಎಚ್ ನರಸಿಂಹಯ್ಯ | ಅಣ್ಣನ ನೆನಪು..... ಪೂರ್ಣಚಂದ್ರ ತೇಜಸ್ವಿ<br>ಸಚಿನ್ ತೆಂಡೂಲ್ಕರ್..... | ಕನಸಿನ ಪಯಣ... ನೇಮಿಚಂದ್ರ<br>ಅಲೆಮಾರಿ ಅಂಡಮಾನ್.... ಪೂರ್ಣಚಂದ್ರ ತೇಜಸ್ವಿ |

...ಮಾಡಿ. ನಿಮ್ಮ ಬಳಿ ಇರದಿದ್ದರೆ ಯಾವ ಯಾವ ಪುಸ್ತಕಗಳನ್ನು ಸಂಗ್ರಹಿಸಲು ನೀವು ... ಪಟ್ಟಿಮಾಡಿ.

ನನ್ನ ಬಳಿ ಇರುವ ಪುಸ್ತಕಗಳು ಈಸೋಪನ ನೀತಿ ಕಥೆಗಳು ಮೂಕಜ್ಜಿಯ ಕನಸುಗಳು ಇಂಗ್ಲೀಷ್ ಡಿಕ್ಷನರಿ ಕುರಾನ್ ದೇವರ ಪ್ರಾರ್ಥನೆ ಪುಸ್ತಕ

ಜ್ಞಾನಪೀಠ ಪ್ರಶಸ್ತಿ ಪಡೆದ ಎಲ್ಲಾ ಕೃತಿಗಳು, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಗಳು, ಕುವೆಂಪು ದಾರಾ ಬೇಂದ್ರೆ ಶಿವರಾಮ ಕಾರಂತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿ ಕೃ ಗೋಕಾಕ್ ಗಿರೀಶ್ ಕಾರ್ನಾಡ್ ಇವರು ಬರೆದಿರುವ ಕೃತಿಗಳು, ತ್ರಿವೇಣಿ ಬರೆದಿರುವ ಕೃತಿಗಳು, ಪ್ರವಾಸ ಕಥನಗಳು ನಾಟಕಗಳು,

## ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ಕಥೆ ಕವಿತೆಗಳನ್ನು ಓದಿ ವರ್ಣಿಸುತ್ತೇನೆ | |
| 2 | ಇತರರ ಅಭಿಪ್ರಾಯಗಳನ್ನು ಒಪ್ಪಿ ಅರ್ಥೈಸಿಕೊಳ್ಳುತ್ತೇನೆ. | |
| 3 | ಬರವಣಿಗೆಯಲ್ಲಿ ಭಾವನಾತ್ಮಕ ಶೈಲಿಯ ಬರವಣಿಗೆಯನ್ನು ಬರೆಯುತ್ತೇನೆ. | |
| 4 | ನನ್ನ ವಿಚಾರ, ಚಿಂತನಾತ್ಮಕ ಅಭಿಪ್ರಾಯಗಳನ್ನು ನನ್ನದೇ ಶೈಲಿಯಲ್ಲಿ ಬರೆಯುತ್ತೇನೆ. | |

**ಶಿಕ್ಷಕರ ಹಿಮ್ಮಾಹಿತಿ**

**ದಿನಾಂಕ:** **ಶಿಕ್ಷಕರ ಸಹಿ**